1) ಮೈಸೂರಿನ ತಾಲ್ಲೂಕು ಕಛೇರಿ ಕಟ್ಟಡದಲ್ಲಿ ಸಬ್ ರಿಜಿಸ್ಟ್ರಾರ್ ಕಛೇರಿಯನ್ನು ನಜರ್‌ಬಾದ್‌ಗೆ ಸ್ಥಳಾಂತರಿಸಲು ಕಾರಣವೇನು?

2) ನಜರ್‌ಬಾದ್‌ನಲ್ಲಿರುವ ಕಛೇರಿ ಕಟ್ಟಡ ಖಾಸಗಿಯದ್ದೇ; ಸರ್ಕಾರದ್ದೇ;

3) ಖಾಸಗಿಯದ್ದಾಗಿದ್ದರೆ ಬಾಡಿಗೆ, ಅಡ್ವಾನ್ಸ್ ಬಗ್ಗೆ ವಿವರ ಒದಗಿಸುವುದು;

4) ಮತ್ತೆ ಈ ಹಿಂದೆ ನಿರ್ವಹಿಸುತ್ತಿದ್ದ ಸ್ಥಳಕ್ಕೆ ಕಛೇರಿಯನ್ನು ಸ್ಥಳಾಂತರಿಸುವ ಬಗ್ಗೆ ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಹೆಚ್.ಸಿ ಶ್ರೀ ಕಂಠಯ್ಯ (ಕಂದಾಯ ಸಚಿವರು) :

1) ಸರ್ಕಾರಿ ಕಟ್ಟಡ ಮೈಸೂರಿನಲ್ಲಿ ಲಭ್ಯವಿಲ್ಲದ ಕಾರಣಕ್ಕೆ ಉಪ ನೋಂದಣಿ ಕಛೇರಿಗಳನ್ನು ನಜರಾಬಾದಿನಲ್ಲಿರುವ ಖಾಸಗೀ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ.

2) ಹೌದು. ಈ ಕಟ್ಟಡ ಖಾಸಗೀಯ ಕಟ್ಟಡ.

3) ಸೂರಜ್ ಕಾಂಪ್ಲೆಕ್ಸ್ ಕಟ್ಟಡದಲ್ಲಿ ಮೊದಲನೆಯ ಮಹಡಿಗೆ ರೂ. 11,000-00, ಎರಡನೇ ಮಹಡಿಗೆ ರೂ. 7,000-00ಗಳನ್ನು ಮಾಹೆಯಾನ ಬಾಡಿಗೆಯನ್ನು ನಿಗಧಪಡಿಸಿದೆ . ಕಟ್ಟಡಕ್ಕೆ ಅಡ್ವಾನ್ಸ್ ಇಲ್ಲ.

4) - ಹೌದು -

**ಕೊಳಚೆ ನಿರ್ಮೂಲನಾ ಮಂಡಳಿಗೆ ಹಣ ಕಾಯ್ದಿರಿಸುವ**

1215 (1368) ಶ್ರೀ ಸುಣಗಾರ ಶರಣಪ್ಪ ತಿಪ್ಪಣ (ಸಿಂಧಗಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯ ನಗರಸಭೆ ಪುರಸಭೆ ಹಾಗೂ ಪಟ್ಟಣ ಪ್ರದೇಶಗಳ ಅಭಿವೃದ್ಧಿ ಎಷ್ಟು ಹಣ ಕಾಯ್ದಿರಿಸಲಾಗಿದೆ?

ಆ) ಸಿಂಧಗಿ ಪಟ್ಟಣದಲ್ಲಿ ಕೊಳಚೆ ಪ್ರದೇಶಗಳಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸಿಂಧಗಿಯಲ್ಲಿ ಎಷ್ಟು ಪ್ರದೇಶಗಳನ್ನು ಕೊಳಚೆ ಪ್ರದೇಶಗಳೆಂದು ಘೋಷಿಸಲಾಗಿದೆ? ಅವು ಯಾವುವು?

ಈ) ಅಲ್ಲಿ ಕೈಗೊಳ್ಳುತ್ತಿರುವ ಕಾಮಗಾರಿಗಳು ಯಾವುವು?

ಉ) ಸಿಂಧಗಿಯಲ್ಲಿನ ಕೊಳಚೆ ಪ್ರದೇಶಗಳಲ್ಲಿ ಕೈಗೊಳ್ಳುತ್ತಿರುವ ಕಾಮಗಾರಿಗಳನ್ನು ತೀವ್ರಗತಿಯಲ್ಲಿ ಮುಗಿಸಲಾಗುವುದೆ? ಹಾಗಿದ್ದಲ್ಲಿ ಎಷ್ಟು ದಿನಗಳಲ್ಲಿ ಅಭಿವೃದ್ಧಿ ಪಡಿಸಲಾಗುವುದು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಬಿಜಾಪುರ ಜಿಲ್ಲೆಯಲ್ಲಿನ ಘೋಷಿತ ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ 1999-2000ನೇ ಸಾಲಿನಲ್ಲಿ ರೂ 26.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

ಆ) ಹೌದು

ಇ) ಒಟ್ಟು 8 ಕೊಳಚೆ ಪ್ರದೇಶಗಳನ್ನು ಘೋಷಿಸಲಾಗಿದೆ.

| | |
|---|---|
| 1. ಹರಿಜನಕೇರಿ | 5. ಭಜಂತ್ರಿ ಓಣಿ |
| 2. ಟಕ್ಕೇದ ಓಣಿ | 6. ಸುಣಗಾರ ಓಣಿ |
| 3. ಭಾಗವಾನ ಓಣಿ | 7. ಪೂಜಾರಿ ಓಣಿ |
| 4. ಡೋರ ಓಣಿ | 8. ತಳವಾರ ಓಣಿ |

ಈ) ಮನೆಗಳ ನಿರ್ಮಾಣ ಮತ್ತು ಮೂಲಭೂತ ಸೌಲಭ್ಯಗಳಾದ ಕಲ್ಲಿನ ಚರಂಡಿ, ಬೀದಿ ದೀಪ ಸಮುದಾಯ ಅಭಿವೃದ್ಧಿ ಕಾಮಗಾರಿ, ಸಮುದಾಯ ಭವನ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಉ) ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾಮಗಾರಿ ಕೈಗೊಂಡಿದ್ದು, ಆ ಕೆಲಸಗಳು ಈಗಾಗಲೇ ಮುಕ್ತಾಯ ಹಂತದಲ್ಲಿರುತ್ತವೆ. ವಿಶೇಷ ಘಟಕ ಯೋಜನೆಯಡಿ ನಿರ್ಮಿಸಲಾಗುತ್ತಿರುವ ಮನೆಗಳ ಪೈಕಿ 84 ಮನೆಗಳು ಮುಕ್ತಾಯ ಹಂತದಲ್ಲಿದ್ದು, 16 ಮನೆಗಳ ಕಾಮಗಾರಿಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಮುಕ್ತಾಯ ಹಂತದಲ್ಲಿ ಪ್ರಾರಂಭಿಸಬೇಕಾಗಿರುವ ಎಲ್ಲಾ ಕಾಮಗಾರಿಗಳು ಬರುವ ಜೂನ್ ಅಂತ್ಯದಲ್ಲಿ ಪೂರ್ಣಗೊಳಿಸಲಾಗುವುದು.

ಅಧ್ಯಕ್ಷರು : ಮಂಡಿಸಲಾಯಿತು.

(ಗೊಂದಲ)

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ನಿನ್ನೆ ದಿವಸ ನಾನು ಮಾತನಾಡುತ್ತಿದ್ದಾಗ ಅರ್ಧದಲ್ಲೇ ನಿಲ್ಲಿಸಿ ಅಪ್ರೋಪ್ರಿಯೇಷನ್ ಬಿಲ್ಲನ್ನು ತಂದರು. ಆ ವಿಚಾರ ಅರ್ಧದಲ್ಲಿ ನಿಂತಿದೆ. ಮೊದಲು ಇವತ್ತು ಅದನ್ನು ಮುಗಿಸಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಅದು ಯಾವಾಗ ಮುಗಿಯುವುದು? ನಿಯಮ 69ರ ಅಡಿಯಲ್ಲಿ ಒಂದು ವಿಚಾರ ಐದು ದಿವಸಗಳವರೆಗೆ ಚರ್ಚೆಯಾಗಿರುವುದು ನಮ್ಮ ಕಲಾಪಗಳ ಇತಿಹಾಸದಲ್ಲಿ ಎಂದೂ ಇಲ್ಲ.

ಶ್ರೀ ಬಿ. ಸೋಮಶೇಖರ್ : ತಾವೇ ನಾನು ಮಾತನಾಡುತ್ತಿದ್ದಾಗ ಮಧ್ಯೆ ಪ್ರವೇಶಿಸಿ ನನ್ನನ್ನು ಕೂರಿಸಿದಿರಿ ಮೊದಲು ಬಿಲ್ಲನ್ನು ಮುಗಿಸಿಬಿಡೋಣ ಆನಂತರ ತಾವು ಮಾತನಾಡಿ ಎಂದು ಹೇಳಿದ್ದಿರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮೊದಲು ಶೂನ್ಯ ವೇಳೆಯನ್ನು ಮುಗಿಸಿ, ನಂತರ ಹೇಗೆ ಮಾಡಬೇಕು ಎಂಬುದನ್ನು ತಮಗೆ ಬಿಡುತ್ತೇವೆ. ಶೂನ್ಯ ವೇಳೆಯಲ್ಲಿ ಐದಾರು ಜನ ಸದಸ್ಯರು ಮಾತನಾಡುತ್ತಾರೆ. ಅನಂತರ ತಾವು ತಮಗೆ ಹೇಗೆ ಬೇಕೋ ಹಾಗೆ ಮಾಡಿ.